**ಸಾಕ್ಷಿಯನ್ನು ದಿನಾಂಕಃ 05.12.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ. ಎಲ್.ಎಸ್. ವಕೀಲರಿಂದಃ**

ನಾನು ಪದವಿವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ಯಾವುದೇ ಒಂದು ಪತ್ರಕ್ಕೆ ಸಹಿ ಹಾಕುವ ಮೊದಲು ಅದರಲ್ಲಿ ಬರೆದಿರುವ ವಿಚಾರಗಳನ್ನು ಓದಿಕೊಂಡು ನಂತರ ಸಹಿ ಮಾಡುತ್ತೇನೆಂದರೆ ಸರಿ. ನನ್ನ ಜಮೀನಿನ ಚೆಕ್ಕುಬಂದಿ ಹೇಳಬಲ್ಲೆ. ದಾವಾ ಷೆಡ್ಯೂಲ್-ಎ 03 ಎಕರೆ 38 ಗುಂಟೆ ಜಮೀನಿನ ಪೂರ್ವಕ್ಕೆ ನನ್ನ ಬಾಬ್ತು ಸ.ನಂ. 11/1 ರ ಜಮೀನು, ಪಶ್ಚಿಮಕ್ಕೆ ಆನಂದರವರಿಗೆ ಸೇರಿದ ಸ.ನಂ. 9 ರ ಜಮೀನು, ಉತ್ತರಕ್ಕೆ – ಬೆಂಜಮಿನ್, ಚಂದ್ರ ಹಾಗು ಚನ್ನವೀರೇಗೌಡರ ಜಮೀನು ಹಾಗು ದಕ್ಷಿಣಕ್ಕೆ ಆನಂದಾರಾಧ್ಯರವರ ಜಮೀನು ಹಾಗು ಸುಬ್ಬಮ್ಮರವರ ಜಮೀನು ಇರುತ್ತದೆ. ನನ್ನ ಅಜ್ಜಿಯಾದ ಮರಿತಾಯಮ್ಮ ಖರೀದಿಸಿದಾಗ ಕ್ರಯ ಪತ್ರದಲ್ಲಿ ತಿಳಿಸಿದ ಚೆಕ್ಕುಬಂದಿ ನನಗೆ ಗೊತ್ತಿರುವುದಿಲ್ಲ. ಸದರಿ ಕ್ರಯ ಪತ್ರದಲ್ಲಿ ಜಮೀನಿನ ಪೂರ್ವಕ್ಕೆ – ಸೋಮಾರಾಧ್ಯರ ಜಮೀನು, ಪಶ್ಚಿಮಕ್ಕೆ – ಬಸವಾರಾಧ್ಯರ ಜಮೀನು ಮತ್ತು ಹೆಬ್ಬಳ, ಉತ್ತರಕ್ಕೆ – ತೋಟಾರಾಧ್ಯರ ಜಮೀನು ಮತ್ತು ಹೆಬ್ಬಳ ಮತ್ತು ದಕ್ಷಿಣಕ್ಕೆ – ಬಸವಾರಾಧ್ಯ ಮತ್ತು ಸೋಮಾರಾಧ್ಯರ ಜಮೀನು ಎಂದು ನಮೂದಿಸಲಾಗಿದೆ ಎಂದರೆ ಸರಿ. ನನ್ನ ಹಾಗು ಪ್ರತಿವಾದಿಯ ಜಮೀನ ನಡುವೆ ಹೆಬ್ಬಳ / ಕಾಲುವೆ ಇದೆ ಎಂದರೆ ಸರಿಯಲ್ಲ. ನಾನು ದಾವಾ ಪತ್ರದಲ್ಲಿ ತಪ್ಪು ಚೆಕ್ಕುಬಂದಿ ನಮೂದಿಸಿರುತ್ತೇನೆಂದರೆ ಸರಿಯಲ್ಲ. ಪ್ರತಿವಾದಿ ನನಗೆ ಸೇರಿದ ಯಾವುದೇ ಜಮೀನನ್ನು ಒತ್ತುವರಿ ಮಾಡಿಕೊಳ್ಳದೇ ಇದ್ದಾಗ್ಯೂ ಸಹ ನಾನು ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆ ಹೂಡಿರುತ್ತೇನೆಂದರೆ ಸರಿಯಲ್ಲ. ಪ್ರತಿವಾದಿಗೆ ಸೇರಿದ

ಜಮೀನನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ದಾವೆ ಹೂಡಿರುತ್ತೇನೆಂದರೆ ಸರಿಯಲ್ಲ. ಹಿಂದೆ ನನ್ನ ತಂದೆ ದಾವಾ ಆಸ್ತಿಗೆ ಸಂಬಂಧಿಸಿದಂತೆ ಸುಬ್ಬಮ್ಮ ಎನ್ನುವವರು ಒತ್ತುವರಿ ಮಾಡಿಕೊಂಡ ಬಗ್ಗೆ ದಾವೆ ಹೂಡಿರುತ್ತಾರೆಂದರೆ ಸರಿ. ಸಾಕ್ಷಿ ಮುಂದುವರೆದು ಸದರಿ ದಾವೆ ಹಾಕಿದ ನಂತರ ಒತ್ತುವರಿ ಬಿಡಿಸಿಕೊಟ್ಟಿರುತ್ತಾರೆಂದು ನುಡಿಯುತ್ತಾರೆ. ನಾನು ಅಕ್ಕ–ಪಕ್ಕದ ಜಮೀನಿನವರಿಗೆ ತೊಂದರೆ ಕೊಡುವ ಉದ್ದೇಶದಿಂದ ಈ ರೀತಿ ಸುಳ್ಳು ದಾವೆ ಹೂಡಿರುತ್ತೇನೆಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(**ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**)

**ಓ ಹೇ ಕೇ ಸಾ ಸ ಇ ಒ.,**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ಹೆಗ್ಗಡದೇವನಕೋಟೆ.**